ಪಿ.ಡಬ್ಲ್ಯೂ.1

ಪ್ರಮಾಣ ವಚನ ಭೋದಿಸಿದ ದಿನಾಂಕಃ-20-12-2019
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು

ಮುಂದುವರೆದ ಮುಖ್ಯ ವಿಚಾರಣೆ ಃ ಶ್ರೀ ಎಲ್ ಯು ವಕೀಲರಿಂದಃ

ದಿಃ28.03.1966ರ ನೊಂದಾಯಿತ ಅಸಲು ವ್ಯವಸ್ಥಾಪತ್ರವನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 2 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ ಪತ್ರಿಕೆಯನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 3 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಕಂದಾಯ ಕಟ್ಟಿದ ರಸೀದಿಗಳನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 4 ರಿಂದ 7 ಎಂದ, ದಾವಾ ಆಸ್ತಿಯ ಮ್ಯೂಟೇಷನ್‌ನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 8 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟ ಮತ್ತೊಂದು ಪಹಣಿ ಪತ್ರಿಕೆಯನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 9 ಎಂದು, ದಾವಾ ಆಸ್ತಿಯ ಕಂದಾಯ ಕಟ್ಟಿದ ರಸೀದಿಗಳನ್ನು ಹಾಜರಿಪಡಿಸಿದ್ದು, ಅವುಗಳನ್ನು ನಿಪಿ 10 ರಿಂದ 13 ಎಂದು ಗುರುತಿಸಲಾಯಿತು. ಪೋಲಿಸರಿಗೆ ನೀಡಿದ ದೂರಿನ ಒಂದು ಪ್ರತಿಯನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 14 ಎಂದು ಹಾಗೂ ಸದರಿ ದೂರಿನ ಸಂಬಂದವಾಗಿ ಪೋಲಿಸರಿಗೆ ನೀಡಿದ ಹಿಂಬರಹವನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 14(ಎ) ಎಂದು, ದಾವಾ ಆಸ್ತಿಯ ರಸೀದಿ ಪಟ್ಟಾಪುಸ್ತಕವನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 15 ಎಂದು , ದಾವಾ ಆಸ್ತಿಯ ಚಾಲ್ತಿ ವರ್ಷದ ಪಹಣಿ ಪತ್ರಿಕೆಯನ್ನು ಹಾಜರಿಪಡಿಸಿದ್ದು, ಅದನ್ನು ನಿಪಿ 16 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಲು ಪ್ರಾರ್ಥಿಸುತ್ತೇನೆ.

ಪಾಟೀ ಸವಾಲುಃ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ಎಂ.ಬಿ ಕುಲಕರ್ಣಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.

ಪಿ.ಡಬ್ಲ್ಯೂ.1